ಇ) ಈ ಕ್ಷೇತ್ರದಲ್ಲಿರುವ ಎಲ್ಲಾ ಅರ್ಹ ಕುಟುಂಬಗಳಿಗೆ ಹಳದಿ ಪಡಿತರ ಚೀಟಿಗಳನ್ನು ವಿತರಿಸಲಾಗುವುದೇ?

ಶ್ರೀ ರಾಮಲಿಂಗಾರೆಡ್ಡಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) 18,232 ಎ.ಪಿ.ಎಲ್ ಪಡಿತರ ಚೀಟಿ ಮತ್ತು 734 ಗಣಕೀಕೃತ ಹಳದಿ ಪಡಿತರ ಚೀಟಿಗಳನ್ನು ಘೋಷಿತ / ಅಘೋಷಿತ ಕೊಳಚೆ ಪ್ರದೇಶದ ಅರ್ಹ ಬಿ.ಪಿ.ಎಲ್ ಕುಟುಂಬಗಳಿಗೆ ವಿತರಿಸಲಾಗಿದೆ.

ಆ) ಬಂದಿದೆ. ಗಣಕೀಕೃತ ಹಳದಿ ಪಡಿತರ ಚೀಟಿಗಳನ್ನು ಘೋಷಿತ / ಅಘೋಷಿತ ಅರ್ಹ ಬಿ.ಪಿ.ಎಲ್ ಕೊಳಚೆ ನಿವಾಸಿಗಳಿಗೆ ವಿತರಿಸಲಾಗಿದೆ. ಆದರೆ ಕೊಳಚೆ ಪ್ರದೇಶದ ಹೊರಗಡೆ ವಾಸಿಸುತ್ತಿರುವ ಬಡವರಿಗೆ ಸಹ ಬಿ.ಪಿ.ಎಲ್. ಪಡಿತರ ಚೀಟಿ ನೀಡಲು ಸರ್ಕಾರ ತೀರ್ಮಾನಿಸಿದೆ ಹಳದಿ ಪಡಿತರ ಚೀಟಿಗಳಿಗಾಗಿ ಅರ್ಜಿಗಳನ್ನು ಪಡೆದುಕೊಳ್ಳಲಾಗಿದೆ.

ಇ) ಹೌದು.

ರಾಜ್ಯದಲ್ಲಿ ಕೃಷಿ ಸಂಸ್ಕರಣೆ ನಿಗಮದಿಂದ ಧಾನ್ಯಗಳ ಸಂಸ್ಕರಣೆ

408 (3691) : ಶ್ರೀ ಚನ್ನಿಗಪ್ಪ ಸಿ (ಕೊರಟಗೆರೆ) ಮಾನ್ಯ ಕೃಷಿ ಉತ್ಪನ್ನ ಸಂಸ್ಕರಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೃಷಿ ಸಂಸ್ಕರಣೆ ಮಾಡುವ ನಿಗಮಗಳ ಸಂಖ್ಯೆ ಎಷ್ಟು;

ಆ) ಈ ನಿಗಮದಲ್ಲಿ ಯಾವ ಯಾವ ಧಾನ್ಯಗಳನ್ನು ಸಂಸ್ಕರಣೆ ಮಾಡಲಾಗುವುದು; ಇದಕ್ಕೆ ತಗಲುವ ವೆಚ್ಚವೇನು;

ಇ) 2000–01, 2001–02, 2002–03 ನೇ ಸಾಲಿನವರೆವಿಗೂ ಕೃಷಿ ಸಂಸ್ಕರಣೆಗಾಗಿ ವೆಚ್ಚ ಮಾಡಿರುವ ಅನುದಾನವೆಷ್ಟು? ವಿವರ ಒದಗಿಸುವುದು;

ಶ್ರೀ ಜಿ. ರಾಜುಗೌಡ (ಕೃಷಿ ಉತ್ಪನ್ನ ಸಂಸ್ಕರಣ ರಾಜ್ಯ ಸಚಿವರು)

ಅ) ಎರಡು

1. ಕರ್ನಾಟಕ ಕೃಷಿ ಕೈಗಾರಿಕಾ ನಿಗಮ
2. ಕರ್ನಾಟಕ ಆಗ್ರೋ ಕಾರ್ನ್ ಪ್ರಾಡೆಕ್ಟ್ಸ್ ಲಿಮಿಟೆಡ್.

ಆ)

	ನಿಗಮದ ಹೆಸರು	ಸಂಸ್ಕರಣೆ ಮಾಡುವ ಧಾನ್ಯ	ವೆಚ್ಚ
1.	ಕರ್ನಾಟಕ ಕೃಷಿ ಕೈಗಾರಿಕಾ ನಿಗಮ	ಹಣ್ಣುಗಳನ್ನು ಸಂಸ್ಕರಣೆ ಮಾಡಲಾಗುತ್ತಿದೆ.	ರೂ. 34000: ಟನ್
2.	ಕರ್ನಾಟಕ ಆಗ್ರೋ ಕಾರನ್ ಪ್ರಾಡಕ್ಟ್ಸ್ ಲಿಮಿಟೆಡ್	ಮುಸುಕಿನ ಜೋಳ	ರೂ. 2000: ಟನ್

ಇ) ಸದರಿ ಮೂರು ವರ್ಷಗಳಿಗೆ ಸಂಸ್ಥರಣೆಗಾಗಿ ಸರ್ಕಾರದ ವತಿಯಿಂದ ಯಾವುದೇ ಅನುದಾನವನ್ನು ನೀಡಿರುವುದಿಲ್ಲ.

ಮೈಸೂರಿನ ಕುಂಬಾರ ಕೊಪ್ಪಲಿನ ಕ್ರಿಕೆಟ್ ಕ್ರೀಡಾಂಗಣ ಅಭಿವೃದ್ಧಿ

4361 (5017) : ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ ಎಂ.ಎಲ್.ಎ ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರಿನ ಕುಂಬಾರ ಕೊಪ್ಪಲಿನ ಕ್ರಿಕೆಟ್ ಕ್ರೀಡಾಂಗಣದ ಅಭಿವೃದ್ಧಿಗೆ ತಗಲುವ ಅಂದಾಜು ವೆಚ್ಚ ಎಷ್ಟು?

ಆ) ಈ ಕ್ರೀಡಾಂಗಣದ ಅಭಿವೃದ್ಧಿಗೆ ಸರ್ಕಾರ ಯಾವ ಯಾವ ಕ್ರಮ ಕೈಗೊಳ್ಳುವುದು?

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು)

ಅ) ಆ) ಕುಂಬಾರ ಕೊಪ್ಪಲು ಬಡಾವಣೆಯಲ್ಲಿ ಸ್ಟೇಡಿಯಂ ನಿರ್ಮಿಸಲು ರೂ. 24,40,000–00 ಗಳಿಗೆ ಅಂದಾಜು ತಯಾರಿಸಿದ್ದು, ರೂ. 19,75,591–00 ಗಳಿಗೆ ಟೆಂಡರ್ ಅನುಮೋದನೆ ಆಗಿರುತ್ತದೆ. ಈಗ ಕೆಲಸವು ಪೂರ್ಣಗೊಳ್ಳುವ ಹಂತದಲ್ಲಿದ್ದು, ಇದುವರೆವಿಗೂ ರೂ. 18,52,445–00 ಗಳಷ್ಟು ವೆಚ್ಚವಾಗಿರುತ್ತದೆ. ಮೈಸೂರು ಮಹಾನಗರ ಪಾಲಿಕೆಯ ಹಣಕಾಸಿನ ಪರಿಸ್ಥಿತಿಯನ್ನು ಅನುಸರಿಸಿ ಕ್ರೀಡಾಂಗಣದ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಾಗುವುದು.

* * *

ಮುದ್ರಕರು: ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳು,
ಸಶಾಮು. ತುಮಕೂರು. ಕಾಸೂ. 16 - 350 ಪುಸ್ತಕಗಳು ದಿ: 26-08-2004.